2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.22
ಸಿ.ಡಬ್ಲೂ.21

ಸಾಕ್ಷಿದಾರರ ಹೆಸರು : ಚಂದ್ರಶೇಖರ ಜಡಗಾರ
ತಂದೆಯ ಹೆಸರು : ಸಂಗಪ್ಪ
ವಯಸ್ಸು : 25 ವರ್ಷ.
ಉದ್ಯೋಗ : ಚಾಲಕ.
ವಾಸಸ್ಥಳ : ದೇವಪೂರ.

ಇಂದು ದಿನಾಂಕ 16-11-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1) ನನಗೆ ಮೃತ ಚಾಸಾ-1 ನಾಗವ್ವ, ಚಾಸಾ-12 ಸರಸ್ವತಿ, ಚಾಸಾ-13 ಶಂಕರ ಇವರ ಪರಿಚಯ ಇಲ್ಲ. ಚಾಸಾ-19, 20 ಮತ್ತು 22 ಪರಿಚಯ ಇದ್ದಾರೆ.

2) ಈಗ್ಗೆ 4-5 ವರ್ಷಗಳ ಹಿಂದೆ ಮಮದಪೂರ ದಾರಿ ಮೇಲೆ ಅಂಬುಲೆನ್ಸ ಬಂದಿತ್ತು, ನಾನು ಅದನ್ನು ನೋಡಿದ್ದೆ. ಚಾಸಾ-19 ಇವರು ಜಮೀನಿನಲ್ಲಿ ಯಾರೊ ಒಬ್ಬ ಬೆಂಕಿ ಹಚ್ಚಿಕೊಂಡು ಬಿದಿದ್ದ ವ್ಯಕ್ತಿಯನ್ನು ನಾನು ನೋಡಿಲ್ಲ, ಆತನನ್ನು ಅಂಬುಲೆನ್ಸಗೆ ಹಾಕಿಲ್ಲ. ಆತನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರು ಹೇಳಿಕೆಗಳು ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ಚಾಸಾ-1 ನಮ್ಮ ಊರಿನಲ್ಲಿ ಬಾಡಿಗೆ ತರಿಕ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದಿಃ 30.12.2019 ರಂದು ಸಂಜೆ ನಾನು ನಮ್ಮ ಮನೆಯಲ್ಲಿದ್ದಾಗ

ಚಾಸಾ-1 ಇವರನ್ನು ಯಾರೊ ಒಬ್ಬ ಅಪರಿಚಿತ ವ್ಯಕ್ತಿ ಬಂದು ಬೆಂಕಿ ಹಚ್ಚಿ ಕೊಲೆ ಮಾಡಲು ಪ್ರಯತ್ನ ಮಾಡಿದ್ದ, ಆತನಿಗೂ ಬೆಂಕಿ ಹತ್ತಿರುತ್ತದೆ, ಆತ ಚಾಸಾ-19 ಇವರ ಕಬ್ಬಿನ ತೋಟದಲ್ಲಿ ಇದ್ದು, ಚಿರಾಡುತ್ತಿದ್ದಾನೆ ಅಂತಾ ಸುದ್ದಿ ಕೇಳಿ ದುರ್ಗವ್ವನ ಗುಡಿಗೆ ಹೊಂದಿಕೊಂಡಿರುವ ಕಬ್ಬಿನ ತೋಟಕ್ಕೆ ಹೋಗಿ ನೋಡಿದ್ದೆ, ಅಲ್ಲಿ ಒಬ್ಬ ಅಪರಿಚಿತ ವ್ಯಕ್ತಿ ಚಿರಾಡುತ್ತಾ ಬಿದಿದ್ದ ಅಂದರೆ ಸರಿಯಲ್ಲ. ಆತನ ಕಾಲಿಗೆ ಕೈಯಿಗೆ ಬೆಂಕಿ ಹತ್ತಿತ್ತು, ಅಲ್ಲಿ ನಮ್ಮ ಊರಿನ ಅನೇಕ ಜನರು ಸೇರಿದ್ದರು, ಆತನ ಹೆಸರನ್ನು ಕೇಳಲಾಗಿ ನಾರಾಯಣಸ್ವಾಮಿ ಸಾಃ ಕೋಲಾರ ಜಿಲ್ಲೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. (4 ಮತ್ತು 6 ನೇ ಆರೋಪಿ ಈ ದಿನ ಗೈರ ಹಾಜರು ಉಳಿದಿದ್ದು, ಅವರ ಗುರುತನ್ನು ವಿವಾದ ಮಾಡವುದಿಲ್ಲ ಅಂತಾ ವಕೀಲರು ನುಡಿದಿರುತ್ತಾರೆ) ನಾನು ಆತನನ್ನು ಚಾಸಾ-1 ಇವರನ್ನು ಏಕೆ ಕೊಲೆ ಮಾಡಲು ಪ್ರಯತ್ನಿಸಿದ್ದೆ ಅಂತಾ ಕೇಳಲಾಗಿ ಆಕೆ ತನ್ನ ಹೆಂಡತಿ ಇದ್ದು, ಆಕೆಯನ್ನ ಚಾಸಾ-13 ಶಂಕರ ಓಡಿಸಿಕೊಂಡು ಬಂದಿದ್ದಾನೆ, ತನ್ನೊಂದಿಗೆ ಬಾ ಅಂತಾ ಕರೆದರೂ ಕೂಡ ಬರಲಾರದಕ್ಕೆ ಸಿಟ್ಟಾಗಿ ನಾನು ಮತ್ತು ಗಲಗಲಿಯ 5 ಜನರು ಸೇರಿ ಕೊಲೆ ಮಾಡಬೇಕೆಂದು ಉಪಚಾರ ಮಾಡಿ ಪೆಟ್ರೋಲ್ ಹಾಕಿ ಸುಟ್ಟಿರುತ್ತೇವೆ, ಆ ಸಮಯದಲ್ಲಿ ನನಗೂ ಬೆಂಕಿ ಹತ್ತಿತ್ತು ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಮುಂದೆ ಪೊಲೀಸರು ಬಂದು 108 ಅಂಬುಲೇನ್ಸನ್ನು ಕರೆಯಿಸಿದಾಗ ನಾನು, ಚಾಸಾ-20, 22 ಆತನನ್ನು ಅಂಬುಲೆನ್ಸನಲ್ಲಿ ಎತ್ತಿಹಾಕಿ ಕಳುಹಿಸಿದ್ದೇವು ಅಂದರೆ ಸರಿಯಲ್ಲ. ಚಾಸಾ-1 ಇವರನ್ನು ಆಸ್ಪತ್ರೆ ದಾಖಲಿಸಿದ ಸುದ್ದಿ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ಮುಂದೆ ಚಾಸಾ-1 ಆಸ್ಪತ್ರೆಯಲ್ಲಿ ಉಪಚಾರ ಹೊಂದಿತ್ತಿರಬೇಕಾದರೆ ದೂರು ಕೊಟ್ಟ ವಿಷಯ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ಆ ದಿನ ಚಾಸಾ-19 ಇವರ ತೋಟದಲ್ಲಿ ಬಿದಿದ್ದ ವ್ಯಕ್ತಿ 6 ನೇ ಆರೋಪಿ ನಾರಾಯಣಸ್ವಾಮಿ ಆಗಿರುತ್ತಾನೆ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 01.01.2020 ರಂದು ಈಗ ಓದಿ ಹೇಳಿದಂತೆ "ದಿಃ30.12.2019 --------------ನೋಡಿದರೆ

ಗುರುತಿಸುತ್ತೇನೆ" ಅಂತಾ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-63 ಅಂತಾ ಗುರುತಿಸಲಾಯಿತು.

2) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 28-03-2020 ರಂದು 6 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿ ಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-64 ಅಂತಾ ಗುರುತಿಸಲಾಯಿತು.

3) ನಾಗವ್ವ ಕಿಮ್ಸ ಹಾಸ್ಪಿಟಲನಲ್ಲಿ ದಿನಾಂಕ: 19-04-2020 ರಂದು ಮತ್ತು ಆಕೆಯ ಮಗು ದಿನಾಂಕ: 18-04-2020 ತೀರಿಕೊಂಡ ಬಾಬತ್ತು ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-65 ಅಂತಾ ಗುರುತಿಸಲಾಯಿತು.

4) ಘಟನೆಯ ವಿಷಯ ಗೊತ್ತಿದ್ದರೂ ಸಹ ಮತ್ತು 6 ನೇ ಆರೋಪಿಯನ್ನು ಅಂಬುಲೆನ್ಸಗೆ ಎತ್ತಿ ಹಾಕಿದ್ದರೂ ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

16/11/2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.23
ಸಿ.ಡಬ್ಲೂ.24

ಸಾಕ್ಷಿದಾರರ ಹೆಸರು : ಈರಪ್ಪ ಚಲುವಾದಿ
ತಂದೆಯ ಹೆಸರು : ಯಲ್ಲಪ್ಪ
ವಯಸ್ಸು : 53 ವರ್ಷ.
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಗಲಗಲಿ.

ಇಂದು ದಿನಾಂಕ 16-11-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1) ನನಗೆ ಗಲಗಲಿಯಲ್ಲಿ ಎರಡು ಮನೆ ಇವೆ. ನನಗೆ ಮೃತ ಚಾಸಾ-1 ನಾಗವ್ವ ಪರಿಚಯ ಇಲ್ಲ. 1 ನೇ ಆರೋಪಿ ಪರಿಚಯ ಇದೆ. ನಾನು ದೊಡ್ಡ ಮನೆಯಲ್ಲಿ ವಾಸವಾಗಿರುತ್ತೇನೆ.

2) ಈಗ್ಗೆ 3-4 ವರ್ಷಗಳ ಹಿಂದೆ 1 ನೇ ಆರೋಪಿ ನಾಗಮ್ಮ ಅನ್ನುವವಳಿಗೆ ಬಾಡಿಗೆ ಕೊಡಿಸಿದ್ದರು. ನಾಗಮ್ಮ ಮನೆಯಲ್ಲಿ ತನ್ನ ಮಕ್ಕಳೊಂದಿಗೆ ವಾಸ ಇದ್ದಳು. ನಾಗಮ್ಮನ ಬಾಜು ಮನೆಯಲ್ಲಿ ಯಾರು ಇರುತ್ತಿದ್ದರು ನನಗೆ ಗೊತ್ತಿಲ್ಲ. ಚಾಸಾ-13 ಶಂಕರ ಇವರ ಪರಿಚಯ ಇಲ್ಲ. ನಾಗಮ್ಮ ನನ್ನ ಮನೆ ಖಾಲಿ ಮಾಡಿಕೊಂಡು ಹೋಗಿ ಈಗ್ಗೆ 4-5 ವರ್ಷಗಳು ಆಗಿದೆ. ಆಕೆ ಜೀವಂತ ಇದ್ದಾಳೊ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿತರು ನಾಗಮನನ್ನು ಕೊಲೆ ಮಾಡಿದ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ದಾಖಲು ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ಚಾಸಾ-13 ನನಗೆ ಪರಿಚಯ ಇದೆ ಅಂದರೆ ಸರಿಯಲ್ಲ. ನಾಗಮ್ಮ ಮತ್ತು ಶಂಕರ ಒಂದೇ ಮನೆಯಲ್ಲಿ ಸಂಸಾರ ಮಾಡಿಕೊಂಡು ಇದ್ದರು ಅಂದರೆ ನನಗೆ ಗೊತ್ತಿಲ್ಲ. ಮುಂದೆ ನಾಗಮ್ಮ ನನ್ನ ಮನೆಯನ್ನು ಖಾಲಿ ಮಾಡಿಕೊಂಡು ದೇವಪುರಕ್ಕೆ ಹೋಗಿದ್ದರು ಅಂದರೆ ನನಗೆ ಗೊತ್ತಿಲ್ಲ.

2) ದಿಃ 30.12.2019 ರಂದು ಸಂಜೆ 6.30 ರ ಸುಮಾರಿಗೆ ನಾನು ನಮ್ಮ ಮನೆಯಲ್ಲಿದ್ದಾಗ ಎಲ್ಲಾ ಆರೋಪಿತರು ಕೊಲೆ ಮಾಡುವ ಉದ್ದೇಶದಿಂದ ನಾಗಮ್ಮ ಇವಳ ಮೇಲೆ ಪೆಟ್ರೊಲ್ ಸುರಿದು ಬೆಂಕಿ ಹಚ್ಚಿದ್ದರು, ಆಕೆಯನ್ನು ಚಿಕಿತ್ಸೆಗಾಗಿ ಹುಬ್ಬಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದರು, ಅಲ್ಲಿ ಆಕೆ ಗಂಡು ಮಗುವಿಗೆ ಜನ್ಮ ನೀಡಿ, ಮಗು ಮತ್ತು ಆಕೆ ಸುಟ್ಟ ಗಾಯಗಳಿಂದ ತೀರಿಕೊಂಡಿದ್ದರು ಅಂತಾ ವಿಷಯ ಗೊತ್ತಾಗಿತ್ತು ಅಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 17.05.2020 ರಂದು ಈಗ ಓದಿ ಹೇಳಿದಂತೆ "ನಾನು ಮೇಲ್ಕಾಂಡ --------------ಕೇಳಿ ಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-66 ಅಂತಾ ಗುರುತಿಸಲಾಯಿತು.

3) ಘಟನೆಯ ವಿಷಯ ಗೊತ್ತಿದ್ದರೂ ಸಹ, ನಿಪಿ-66 ರಂತೆ ಹೇಳಿಕೆ ನೀಡಿದ್ದರೂ ಸಹ ನಾನು ಆರೋಪಿತರೊಂದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

16/11/2024